

## ಪಿನ್ನಮ್ಮ

ಒಮ್ಮೆ ನಾನು, ನನ್ನ ಗೆಳತಿ ಒಂದು ಮೇಳಕ್ಕೆ ಹೋಗಿದ್ದೆವು. ದೂರದಲ್ಲಿದ್ದ ಯಾರನ್ನೋ ನೋಡಿ ನನ್ನ ಗೆಳತಿ, 'ಪಿನ್ನಮ್ಮಾ... ಪಿನ್ನಮ್ಮಾ...' ಅಂತ ಕೂಗಿದಳು. ಆ ಗಲಾಟೆಯಲ್ಲಿ ಅವರಿಗೆ ಕೇಳಿಸಲಿಲ್ಲ. ಸರಿ ನಾವೇ ಬೇಗ ಬೇಗ ದಾರಿ ಬಿಡಿಸಿಕೊಂಡು ಅವರ ಹತ್ತಿರ ಹೋದೆವು. ನನಗೂ ಅವರ ಪರಿಚಯವಿತ್ತು. ಗೆಳತಿಗೆ, 'ಏ... ಇವರು ನಿನ್ನ ದೊಡ್ಡಮ್ಮ(ತೆಲುಗಿನಲ್ಲಿ ಪೆದ್ದಮ್ಮ) ಅಲ್ವೇನೇ... ಮತ್ತೆ ಪಿನ್ನಮ್ಮಾ(ಚಿಕ್ಕಮ್ಮಾ) ಅಂತ ಯಾಕೆ ಕರೀತಿದ್ದೀಯಾ...' ಅಂತ ಕೇಳಿದೆ. 'ಹಾ! ಅದೂ ಪಿನ್ನಮ್ಮ ಅಂತ ಯಾಕೆ ಕೂಗಿದೆ ಅಂದ್ರೆ ಈ ದೊಡ್ಡಮ್ಮ(ಪೆದ್ದಮ್ಮ) ಯಾವಾಗಲೂ ಸೇಫ್ಟಿಪಿನ್ನು, ಚಿಕ್ಕ ಪಿನ್ನು ಮತ್ತು ಹೇರ್ ಪಿನ್ನು ಹೀಗೆ ಎಲ್ಲಾ ತರದ ಪಿನ್ನುಗಳನ್ನು ಪರ್ಸ್‌ನಲ್ಲಿ ಸ್ಟಾಕ್ ಇಟ್ಕೊಂಡಿರ್ತಾರೆ. ಅದಕ್ಕೆ ನಾವೆಲ್ಲಾ ಇವರಿಗೆ (ಪಿನ್ನಮ್ಮಾ ತೆಲುಗಿನಲ್ಲಿ) ಅಂದ್ರೆ ಚಿಕ್ಕಮ್ಮ ಅಂತ ಅರ್ಥ ಅದಕ್ಕೆ. ನಾವು ಪಿನ್ನಮ್ಮ ಅಂತ ಕರೀತೀವಿ' ಅನ್ನೋದೇ? ಪಾಪ ಆ ಪಿನ್ನಮ್ಮನ ಮುಖ ನೋಡಬೇಕಾಗಿತ್ತು. ನನಗೆ ನಗು ಬಂದರೂ ತಡೆ ಹಿಡಿದಿದ್ದೆ.

**ಲೀಲಾ ಚಂದ್ರಶೇಖರ, ಬೆಂಗಳೂರು**

## ನಮ್ಮ ಡ್ಯಾಡಿ ವೈಫ್!

ತಂಗಿಯ ಮಗ ಎಂಟು ವರ್ಷದ ವರುಣ್ ಬಹಳ ಚೂಟಿ. ಯಾರೇ ಮಾತನಾಡಿಸಿದರೂ ಅಂಜಿಕೆಯಿಲ್ಲದೆ, ಅರಳು ಹುರಿದಂತೆ ಮಾತನಾಡುತ್ತಾನೆ. ಇತ್ತೀಚೆಗೆ ಆತನ ತಂದೆಗೆ ವರ್ಗಾವಣೆಯಾದ ಹಿನ್ನೆಲೆಯಲ್ಲಿ ಅವನ ಶಾಲೆಯನ್ನು ಬದಲಾಯಿಸಲಾಗಿತ್ತು. ಅಲ್ಲಿನ ಶಿಕ್ಷಕಿ, ಹೊಸದಾಗಿ ಶಾಲೆಗೆ ಸೇರಿದ್ದ ವರುಣ್‌ನನ್ನು ಮಾತಿಗೆಳೆದು, ಆತನ ತಂದೆ, ತಾಯಿ, ಮೊದಲು ಓದಿದ ಶಾಲೆ ಮುಂತಾದುವುಗಳ ಬಗ್ಗೆ ಕೇಳಿದ್ದರು. ಮಾತಿನ ಮಧ್ಯದಲ್ಲಿ ಬಂದ 'ವರುಣ್, ನಿಮ್ಮ ಅಮ್ಮ ಹೌಸ್ ವೈಫಾ?' ಎಂಬ ಶಿಕ್ಷಕಿಯ ಪ್ರಶ್ನೆಗೆ ನಮ್ಮ ವರುಣ್ ಉತ್ತರಿಸಿದ್ದೇನು ಗೊತ್ತೇ? 'ಇಲ್ಲ ಮ್ಯಾಮ್, ನಮ್ಮ ಅಮ್ಮ ನಮ್ಮ ಡ್ಯಾಡಿ ವೈಫ್' ಎಂದು!

ಒಮ್ಮೆ ದಾರಿಯಲ್ಲಿ ಸಿಕ್ಕ ಶಿಕ್ಷಕಿ ಈ ಬಗ್ಗೆ ನಮಗೆ ಹೇಳಿದಾಗ ನಮಗೆಲ್ಲ ನಗುವೋ ನಗು.

**ಡಾ. ವಿನಯ ಶ್ರೀನಿವಾಸ್, ಶಿವಮೊಗ್ಗ**



ಚಿತ್ರಗಳು: ಗಣೇಶ ಆಚಾರ್ಯ